





ಸೀನ ಮತ್ತು ಸುಬ್ಬ ತುಂಬಾ ದಿನದ ನಂತರ ಭೇಟಿಯಾದ್ರು. ಸುಬ್ಬ ಯಾಕೋ ಸಪ್ಪಗಿದಾನೆ ಅನಿಸ್ತು ಸೀನಂಗೆ.

'ಯಾಕೋ ಹೀಗೆ ಮಂಕಾಗಿದೀಯ?' ಎಂದು ಕೇಳಿದ.

'ನಾನು ತಂದೆಯಾಗ್ತಿದೀನಿ' ಅಂದ ಸುಬ್ಬ.

'ಅದಕ್ಕೆ ಯಾರಾದರೂ ಹೀಗೆ ಹ್ಯಾಪ್ ಮೋರೆ ಹಾಕಿಕೊಂಡಿರ್ತಾರಾ? ಹ್ಯಾಪಿಯಾಗಿರೋ!'

'ಏನು ನಿನ್ನ ತಲೆ ಹ್ಯಾಪಿಯಾಗಿರೋದು? ನನ್ನ ಹೆಂಡ್ತಿಗೆ ಇನ್ನೂ ಈ ವಿಷಯ ಗೊತ್ತಿಲ್ಲ' ಎಂದು ಪೇಚಾಡಿದ ಸುಬ್ಬ.

★★★

ಪಮ್ಮಿ ಪಚ್ಚೂನ ತುಂಬಾ ಪ್ರೀತಿಸ್ತಿದ್ಲು. ಒಂದಿನ ಪಾರ್ಕ್‌ನಲ್ಲಿ ಪಮ್ಮಿ ಪಚ್ಚಿನ ಕೇಳಿದ್ಲು: 'ನಿಶ್ಚಿತಾರ್ಥ ಆದ್ರೆ ನನಗೊಂದು ರಿಂಗ್ ಕೊಡ್ತೀಯಾ?'

'ಓ ಎಸ್! ಅದಕ್ಕೇನು? ನಿನ್ನ ಫೋನ್ ನಂಬರ್ ಕೊಡು' ಅಂದ ಪಚ್ಚಿ!

★★★

ಬೆಟ್ಟಪ್ಪ ಔಷಧದ ಅಂಗಡಿಗೆ ಹೋಗಿ ಕೇಳಿದ್ರು:

'ನನ್ನ ಮೊಮ್ಮಗನಿಗೆ ಯಾವುದಾದರೂ ಒಂದು ವಿಟಮಿನ್ ಟಾನಿಕ್ ಕೊಡಿ'

'ಯಾವುದು ಕೊಡಲಿ? ಏ ನಾ? ಬಿ ನಾ? ಸಿ ನಾ? ಡಿ ನಾ?' ಎಂದು ಕೇಳಿದ ಅಂಗಡಿಯವ.

'ಯಾವುದಾದರೂ ಕೊಡಿ, ಅವನಿಗೆ ಅದೆಲ್ಲಾ ಗೊತ್ತಾಗಲ್ಲ, ಅವನು ಕನ್ನಡ ಸ್ಕೂಲು' ಅಂದ್ರು ಬೆಟ್ಟಪ್ಪ.

★★★

ಸರಸು ಸಂತೇಲಿ ಕಳೆದು ಹೋಗಿದ್ಲು. ಗುಂಡ ಅವಳಿಗೋಸ್ಕರ ಹುಡುಕಿ ಸಾಕಾದ. ಎದುರಿಗೆ ವಯ್ಯಾರಿ ವನಜ ಬರ್ತಿದ್ಲು.

'ಮೇಡಂ, ನಿಮ್ಮ ಜೊತೇಲಿ ಒಂದೆರಡು ನಿಮಿಷ ನಿಂತು ಮಾತಾಡಬಹುದೇ?' ಗುಂಡ ಅಡ್ಡಗಟ್ಟಿದ.

'ನಾನ್ಸೆನ್ಸ್! ನನ್ನ ಹತ್ರ ಮಾತಾಡೋಕೆ ಏನಿದೆ?'

'ಏನಿಲ್ಲ ಹೀಗೆ ಸುಮ್ನೆ...!'

'ಮದುವೆಯಾಗಿ ಹೀಗೆ ಕಂಡ ಕಂಡ ಹೆಂಗಸರನ್ನು ಅಡ್ಡಗಟ್ಟೋಕೆ ನಾಚಿಕೆಯಾಗಲ್ವಾ ನಿಮ್ಗೆ?'

'ಛೆ. .ಛೆ. .! ಹಾಗೆಲ್ಲಾ ಏನಿಲ್ಲ. ನನ್ನ ಹೆಂಡ್ತಿ ಎಲ್ಲಿದಾಳೋ ಕಾಣ್ತಿಲ್ಲ. ನಾನು ಯಾರಾದರೂ ಹೆಂಗಸರ ಜೊತೆ ಮಾತಾಡೋದನ್ನ ನೋಡುದ್ರೆ ಅವಳು ಎಲ್ಲಿದ್ರೂ ಓಡಿ ಬರ್ತಾಳೆ. ಅಗೋ... ಬಂದೇ ಬಿಟ್ಲು, ಥ್ಯಾಂಕ್ಸ್ ' ಎಂದು ಗುಂಡ ಸರಸು ಕಡೆ ಓಡಿದ.

★★★



ಪಿಂಟು ಅವರಪ್ಪನ ಜೊತೆ ಆಸ್ಪತ್ರೆಗೆ ಬಂದ. ಅಲ್ಲಿ ಅವನ ಸ್ನೇಹಿತೆ ಪಿಂಕಿ ಅಳ್ತಾ ಇದ್ಲು.

'ಯಾಕೇ ಅಳ್ತಿದೀಯ? ಏನಾಯ್ತೇ?' ಕೇಳಿದ ಪಿಂಟು.

'ಬ್ಲಡ್ ಟೆಸ್ಟ್ ಮಾಡಿಸಬೇಕು. ಡಾಕ್ಟರ್ ಬೆರಳು ಕುಯ್ತಾರೆ' ಎಂದು ಬಿಕ್ಕಿದಳು ಪಿಂಕಿ.

ಇದನ್ನು ಕೇಳಿದ್ದೇ ತಡ, ಪಿಂಟುವೂ 'ಹೋ' ಎಂದು ಅಳಲಾರಂಭಿಸಿದ.

'ನೀನ್ಯಾಕೋ ಅಳ್ತಿದೀಯ?'–ಕೇಳಿದ್ಲು ಪಿಂಕಿ.

'ನಾನು ಯೂರಿನ್ ಟೆಸ್ಟ್ ಮಾಡ್ಸಕ್ಕೆ ಬಂದಿದೀನಿ' ಎಂದು ಪಿಂಟು ಸೊರಗುಟ್ಟಿದ!

ಸಂಗ್ರಹ: **ತುರುವೇಕೆರೆ ಪ್ರಸಾದ್**




ಉತ್ತೇಜನಕವಾದ ಒಂದು ವಾರಾಂತ್ಯದಲ್ಲಿ ನಾವು ನಮ್ಮ ಪ್ರಣಯದ ಸಂಭ್ರಮ ಆದರಿಸಿದೆವು: ಇದು ಜೋಕ್ ಅಲ್ಲ, ನಮ್ಮ ಮಂಚ ಮುರಿದುಹೋಯಿತು (ಎರಡು ಬಾರಿ!!!)
ಇದೀಗ, ನಾನು, ನನ್ನ ಸಂಗಾತಿ ಮತ್ತು ಸೆಲೆಬ್ರೇಟ್ ಲವ್ ಶಾಶ್ವತವಾಗಿ ಬೆಸೆಯಲ್ಪಟ್ಟಿದ್ದೇವೆ.

Send the queries to: solutions@celebratelovespray.com
Call: +91 80 65835301 / 90363 02751 I www.celebratelovespray.com

**This is a Public Interest Initiative by Celebrate Love.**

Celebrate Love
Herbal Spray & Capsules

ನಿಮ್ಮ ಎಲ್ಲ ಸಂದೇಹ, ಚಿಂತೆ ಮತ್ತು ಒತ್ತಡಗಳಿಂದ ಮುಕ್ತರಾಗಿ. ನಾವು ನಿಮ್ಮ ಸಮಸ್ಯೆಗಳನ್ನು ನಿವಾರಿಸುವ ಯತ್ನದಲ್ಲಿದ್ದೇವೆ.
ನಿಮ್ಮ ಸಂಬಂಧಗಳ ಅಥವಾ ಲೈಂಗಿಕ ಸಂಬಂಧಿತ ಪ್ರಶ್ನೆಗಳನ್ನು ಕಳುಹಿಸಿ. ಖ್ಯಾತ ವೈದ್ಯರುಗಳು ಉತ್ತರಿಸಲಿದ್ದಾರೆ.